ಉಳಿದ ಕಥೆಗಳಿಗೆ ಸಿಕ್ಕಿಲ್ಲ. 'ದೊರೆ'ಯಂತೆ ಉಳಿದ ಕಥೆಗಳೂ ವರ್ತಮಾನದ ಬೇಗುದಿಯನ್ನೇ ಮುಖಾಮುಖಿಯಾಗಿವೆ. ಗಣಿಗಾರಿಕೆಯಿಂದಾಗಿ ಒಮ್ಮಿಂದೊಮ್ಮೆಗೇ ಹೊಸ ಸ್ವರೂಪ ಪಡೆಯುವ ಸೀಮೆಯೊಂದರ ಸ್ವರೂಪವನ್ನು ಚಿತ್ರಿಸುವ 'ಉತ್ಖನನ' ಕಥೆ, ನೆಲದೊಳಗಿನ ಅದಿರಿನೊಂದಿಗೆ ಅಂತರಂಗದ ಆರ್ದ್ರತೆಯ ಪಸೆಯೂ ಖಾಲಿಯಾಗತೊಡಗಿ, ಅದರ ಜಾಗದಲ್ಲಿ ಲೋಭ ತುಂಬಿಕೊಳ್ಳುತ್ತಿರುವುದನ್ನು ಬಹು ಸೊಗಸಾಗಿ ಚಿತ್ರಿಸುತ್ತದೆ. ಗಣಿಗಾರಿಕೆಯ ಕಬಂಧ ಬಾಹುಗಳು ಜನಜೀವನವನ್ನು ಮಾತ್ರವಲ್ಲ; ಪರಿಸರದ ಭಾವಕೋಶಗಳು, ನಂಬಿಕೆಗಳು ಹಾಗೂ ಸ್ಮೃತಿಗಳನ್ನೂ ಆಪೋಶನ ತೆಗೆದುಕೊಳ್ಳುತ್ತಿರುವುದನ್ನು ಕಥೆ ಸಾಕಷ್ಟು ವಿವರವಾಗಿ ಚಿತ್ರಿಸುತ್ತದೆ. ಆದರೆ, ಈ ವಿವರಗಳು ಸಾವಯವ ಶಿಲ್ಪವಾಗಿ ಕಥೆಯೊಳಗೆ ಹೆಣೆದುಕೊಂಡಿಲ್ಲ.

ತಿರಿದುಣ್ಣುವ ಹೆಣ್ಣುಮಗಳೊಬ್ಬಳಿಗೆ ಅವಳ ಸೌಂದರ್ಯವೇ ಮುಳುವಾಗುವ 'ಕಲ್ಯಾಣಿ' ಕಥೆ ತನ್ನ ವಸ್ತುವಿನಿಂದಾಗಿ ಗಮನಸೆಳೆಯುತ್ತದೆ. ಕಲ್ಯಾಣಿಯ ಬಗ್ಗೆ ಯುವಕನೊಬ್ಬನ ಮನಸ್ಸಿನಲ್ಲಿ ಮಧುರಭಾವಗಳು ಮೊಳೆಯುವುದು ಕಥೆಗೆ ರಮ್ಯ ಆವರಣವೊಂದನ್ನು ಕಲ್ಪಿಸಿಕೊಡುತ್ತದೆ. ಆದರೆ, ವರ್ತಮಾನದ ಕ್ರೌರ್ಯ ಯುವತಿಯ ಬದುಕನ್ನೂ ಯುವಕನ ಮನಸ್ಸಿನ ರಮ್ಯಭಾವಗಳನ್ನೂ ಬಲಿತೆಗೆದುಕೊಂಡು ಬಿಡುತ್ತದೆ. ಯುವಕನ ಪ್ರೇಮ ಎಷ್ಟರಮಟ್ಟಿಗೆ ಪ್ರಾಮಾಣಿಕವಾದುದು ಎನ್ನುವ ಪ್ರಶ್ನೆಯನ್ನೂ ಉಳಿಸುತ್ತದೆ. 'ಹಾವು ಏಣಿ' ಕಥೆಯಲ್ಲಿ, ತನ್ನ ಶ್ರಮ ಹಾಗೂ ಸಂಕಲ್ಪಶಕ್ತಿಯಿಂದಾಗಿ ಆರ್ಥಿಕ ಸುಭದ್ರತೆ ಕಂಡುಕೊಳ್ಳುವ ಕುಟುಂಬವೊಂದು, ರಾಜಕಾರಣದ ಆಕಾಂಕ್ಷೆಯುಳ್ಳ ಮುಖಂಡನೊಬ್ಬನನ್ನು ನಂಬಿ ದುರವಸ್ಥೆಗೆ ತಲುಪುತ್ತದೆ. ಆ ಮುಖಂಡನ ಬಳಿ ಕೆಲಸ ಮಾಡುವ ವ್ಯಕ್ತಿಯ ಅಂತಃಕರಣದಿಂದಾಗಿ ಊರು ಬಿಡುವ ಸ್ಥಿತಿ ತಲುಪಿದ್ದ ಕುಟುಂಬ ಮತ್ತೆ ನೆಮ್ಮದಿ ಕಂಡುಕೊಳ್ಳುತ್ತದೆ. 'ಊರ ಮುಂದಲ ಹೊಲ' ಕಥೆಯಲ್ಲಿ, ರಾಜಕೀಯ ವ್ಯಕ್ತಿಯ ಕಪಿಮುಷ್ಟಿಯಿಂದ ಸಾಮಾನ್ಯ ವ್ಯಕ್ತಿಯೊಬ್ಬ ತನ್ನ ಭೂಮಿ ಉಳಿಸಿಕೊಳ್ಳುವ ಜಾಣತನದ ಕಥೆಯಿದೆ. ಈ ಎಲ್ಲ ಕಥೆಗಳು ಗ್ರಾಮಭಾರತದ ಈ ಹೊತ್ತಿನ ತವಕ ತಲ್ಲಣಗಳನ್ನು ಕಟ್ಟಿಕೊಡುವ ಪ್ರಾಮಾಣಿಕ ಪ್ರಯತ್ನದಂತಿವೆ. ಭ್ರಷ್ಟ ರಾಜಕೀಯ ವ್ಯವಸ್ಥೆ ಊರುಕೇರಿಗಳನ್ನು ಆವರಿಸಿಕೊಂಡು ಆಪೋಶನ ತೆಗೆದುಕೊಳ್ಳಲು ತವಕಿಸುತ್ತಿರುವ ವರ್ತಮಾನಕ್ಕೆ ಸೃಜನಶೀಲ ವ್ಯಕ್ತಿಯೊಬ್ಬನ ಪ್ರತಿಕ್ರಿಯೆ ರೂಪದಲ್ಲಿ 'ಡಂಕಲ್‌ಪೇಟೆ'ಯ ಕಥೆಗಳು ಮುಖ್ಯವೆನ್ನಿಸುತ್ತವೆ. ಆದರೆ, ಈ ತವಕತಲ್ಲಗಳು ಬಹುತೇಕ ಸಂದರ್ಭಗಳಲ್ಲಿ ಬಿಡಿ ಬಿಡಿ ವಿವರಗಳಾಗಿಯೇ ಉಳಿದುಬಿಡುತ್ತವೆ; ಕಥೆಗಳಲ್ಲಿನ ಸಂಕಷ್ಟಗಳಿಗೆ ಉತ್ತರ ರೂಪದಲ್ಲಿ ಕಥೆಗಾರರು ಮುಂದಿಡುವ ಸಾಧ್ಯತೆಗಳು ಕಥನದ ಸಾಂದ್ರತೆಯನ್ನು ತೆಳುಗೊಳಿಸುವಂತಿವೆ. ತಾರ್ಕಿಕ ಅಂತ್ಯ ಇರಬೇಕೆನ್ನುವ ಬರಹಗಾರನ ಹಟ ಕಥೆಯ ಸಾಧ್ಯತೆಗಳಿಗೆ ನಿರ್ದಿಷ್ಟ ಚೌಕಟ್ಟನ್ನು ತೊಡಿಸಿಬಿಡುತ್ತವೆ.

'ಡಂಕಲ್‌ಪೇಟೆ' ಸಂಕಲನದ ಕಥೆಗಳು ಭಾಷೆಯ ಕಾರಣದಿಂದಾಗಿಯೂ ಗಮನಿಸಬೇಕಾದ ರಚನೆಗಳು. ಬಳ್ಳಾರಿ ಸೀಮೆಯ ನುಡಿಗಟ್ಟನ್ನು ಕಥೆಗಾರರು ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಭಾಷೆಯ ಪ್ರಾದೇಶಿಕ ಸೊಗಡು ಕಥೆಗಳ ಸಂವಹನಕ್ಕೆ ಅಡ್ಡಿಯಾಗಿಲ್ಲ, ಭಾಷೆಯನ್ನು ಹಟ ಹಿಡಿದು ಬಳಸಿದಂತೆ ಭಾಸವಾಗುವುದಿಲ್ಲ. ಕಥನಕ್ಕೆ ಪೂರಕವಾಗಿ, ಸಂವಹನಕ್ಕೆ ತೊಡಕಿಲ್ಲದಂತೆ ನುಡಿಯನ್ನು ದುಡಿಸಿಕೊಂಡಿರುವುದು 'ಡಂಕಲ್‌ಪೇಟೆ'ಯ ಕಥೆಗಳ ಹೊಳಪು ಹೆಚ್ಚಿಸಿದೆ.

ವರ್ತಮಾನದ ವ್ಯಥೆಗಳನ್ನು ಕಥೆಯನ್ನಾಗಿಸುವುದು ಇಲ್ಲವೇ ಕವಿತೆಯನ್ನಾಗಿಸುವುದು ಬರಹಗಾರನೊಬ್ಬ ಎದುರುಗೊಳ್ಳಲೇಬೇಕಾದ ಅಗ್ನಿದಿವ್ಯ. ಈ ಮುಖಾಮುಖಿಯಲ್ಲಿ, ವ್ಯಥೆಯನ್ನು ಕಲಾತ್ಮಕವಾಗಿಸಿದಷ್ಟೂ ಅದರ ಪರಿಣಾಮ ಮತ್ತು ಬಾಳುವಿಕೆ ಹೆಚ್ಚಾಗುತ್ತದೆ. ಗೋಜು ಗೊಡವೆಗಳನ್ನು ಒಡವೆಗಳನ್ನಾಗಿಸುವ ಸಾಮರ್ಥ್ಯ ವೀರೇಂದ್ರ ಅವರಿಗಿರುವುದನ್ನು 'ದೊರೆ' ಕಥೆ ಸ್ಪಷ್ಟವಾಗಿಯೂ, ಉಳಿದ ಕಥೆಗಳು ಸಾಧ್ಯತೆಯ ರೂಪದಲ್ಲೂ ನಮಗೆ ಕಾಣಿಸುತ್ತವೆ. ಸಂಯಮ ಹಾಗೂ ಕಸುಬುದಾರಿಕೆ ಬರವಣಿಗೆಯ ದಾರಿಯಲ್ಲಿ ನಿರಂತರವಾಗಿ ಕರಗತಗೊಳಿಸಿಕೊಳ್ಳಬೇಕಾದ ಸಿದ್ಧಿಗಳಷ್ಟೇ.

**ಲೇ: ವೀರೇಂದ್ರ ರಾವಿಹಾಳ್;ಪು : 152; ಬೆ: ₹ 180; ಪ್ರ: ವಿಜಯ್ ಬುಕ್ಸ್ ಬಳ್ಳಾರಿ, ಫೋನ್: 8660557637**